# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

**ಸಿ.ಸಿಃ 1676/2022**

ಫ್ರಾಸಾ-2, ಚಾಸಾ-5

| | | |
|---|---|---|
| ಸಾಕ್ಷಿದಾರರ ಹೆಸರು | : | ಚಿಕ್ಕಣ್ಣ |
| ತಂದೆಯ ಹೆಸರು | : | ಶಿವಯ್ಯ |
| ವಯಸ್ಸು | : | 50ವರ್ಷ |
| ಉದ್ಯೋಗ | : | ಆಹಾರ ನಿರೀಕ್ಷಕರು, ಚಾಮರಾಜನಗರ ತಾಲ್ಲೂಕು ಪಂಚಾಯಿತಿ |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕಃ 03.07.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ಚಾಮರಾಜನಗರ ತಾಲ್ಲೂಕು ಕಚೇರಿಯಲ್ಲಿ ಆಹಾರ ವಿಭಾಗದಲ್ಲಿ ದ್ವಿತಿಯ ದರ್ಜೆ ಸಹಾಯಕನಾಗಿ ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಚಾಸಾ-1 ರಾಜಣ್ಣ, ಚಾಸಾ-4 ಮಹೇಶಕುಮಾರ್ ಗೊತ್ತು. ನಮ್ಮ ಇಲಾಖೆಯವರು. ರಾಜಣ್ಣನವರು ಸಮಾರು 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ದಿಃ 16.11.2021 ರಂದು ಮಃ2.50 ರ ಸಮಯದಲ್ಲಿ ನಾನು ಮತ್ತು ಚಾಸಾ-4ರವರು ಕಚೇರಿಯಲ್ಲಿದ್ದಾಗ, ಆಹಾರ ನಿರೀಕ್ಷಕರಾದ ಚಾಸಾ-1ರವರು ಚಾಮರಾಜನಗರ ರೈಲ್ವೆ ಬಡಾವಣೆಯ ಮಾಂಗಲ್ಯ ಕಲ್ಯಾಣ ಮಂಟಪದ ಹಿಂಭಾಗದ ರಾಮಚಂದ್ರರವರಿಗೆ ಸೇರಿದ ಹಂಚಿನ ಮನೆಯಲ್ಲಿ ಜಗದೀಶ ಎಂಬುವವರು ಕಮರ್ಷಿಯಲ್ಲಿ ಸಿಲಿಂಡರ್ ಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುತ್ತಾರೆ ಎಂದು ಬಾದ್ಮೀದಾರರಿಂದ ಮಾಹಿತಿ ಬಂದಿ ಮೂರು ಜನರು ಒಂದು ಬೈಕಿನಲ್ಲಿ ಹೊರಟು ಚಾಮರಾಜನಗರ LIC ಕಚೇರಿಯಲ್ಲಿ ರಾಜೇಶ್ ಮತ್ತು ಶಿವರಾಜು ಎಂಬುವವರನ್ನು ಕರೆದು ವಿಚಾರವನ್ನು ತಿಳಿಸಿ, ದಾಳಿಗೆ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ಒಪ್ಪಿಕೊಂಡು ನಮ್ಮ ಜೊತೆ ಬಂದಿರುತ್ತಾರೆ. ರೈಲ್ವೆ ಬಡಾವಣೆಯಿಂದ

ರಾಮಚಂದ್ರರವರ ಮನೆಯ ಬಳಿ ಮಃ3.30 ಸಮಯಕ್ಕೆ ನೋಡಲಾಗಿ ಮನೆಯ ಬಳಿ ಒಬ್ಬ ಆಸಾಮಿ ನಿಂತಿದ್ದು, ಮನೆಯ ಮುಂಭಾಗವನ್ನು ಬೊಲೆರೋ ಪಿಕ್ ಅಪ್ ವಾಹನದಲ್ಲಿ ಬಸ್ಸಿನಲ್ಲಿದ್ದ ಸುಮಾರು ಕಮರ್ಷಿಯಲ್ ಸಿಲಿಂಡರ್ ಗಳಿದ್ದು, ಆಸಾಮಿನಮ್ಮನ್ನು ನೋಡಿ ಮನೆಯ ಬಾಗಿಲನ್ನು ಹಾಕಿಕೊಂಡು ಹೋಗುತ್ತಿದ್ದಾಗ ನಾವುಗಳು ಮನೆಯ ಬಳಿ ಹೋಗಿ, ಮನೆಯ ಒಳಗಡೆ ನೋಡಲಾಗಿ, ವಿವಿಧ ಕಂಪನಿಗೆ ಸೇರಿದ ಖಾಲಿ ಸಿಲಿಂಡರ್ ಗಳು ಹಾಗೂ ಕೆಲವು ತುಂಬಿದ ಸಿಲಿಂಡರ್ ಗಳು ಇರುವುದು ಕಂಡು ಬಂದಿದ್ದು, ಆರೋಪಿಯನ್ನು ವಿಚಾರ ಮಾಡಿದಾಗ, ತನ್ನ ಹೆಸರು ಜಗಧೀಶ ಎಂದು ಕಮರ್ಷಿಯಲ್ಲಿ ಸಿಲಿಂಡರ್ ಗಳನ್ನು ದಾಸ್ತಾನು ಮಾಡಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಇಟ್ಟಿರುವುದಾಗಿ ತಿಳಿಸಿದ್ದು, ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಒಟ್ಟು 115 ಸಿಲಿಂಡರ್ ಗಳಿದ್ದು ಅವುಗಳನ್ನು 27 ಖಾಲಿ HP ವಾಣಿಜ್ಯ ಸಿಲಿಂಡರ್ ಗಳು, 10 ಖಾಲಿ ಇಂಡಿಯನ್ ಕಂಪನಿಯ ಸಿಲಿಂಡರ್ ಗಳು, 2 ಗೃಹ ಬಳಕೆಯ ಭಾರತ್ ಗ್ಯಾಸ್ ಸಿಲಿಂಡರ್ ಗಳು, ಬುಲೊರೋ ಪಿಕ್ ಅಪ್ ವಾಹನದಲ್ಲಿ 71 HP ಕಂಪನಿಯ ವಾಣಿಜ್ಯ ಸಿಲಿಂಡರ್ ಗಳಿದ್ದು, ಎಲ್ಲಾ ಸಿಲಿಂಡರ್ ಗಳನ್ನು ನಮ್ಮ ಹಾಗೂ ಪಂಚರ ಸಮಕ್ಷಮ ಸಂಃ 4.30 ರಿಂದ 5.30 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿ, ವಾಹನ ಸಮೇತ ವಶಪಡಿಸಿಕೊಳ್ಳಲಾಯಿತು. ನಂತರ ಮುಂದಿನ ತನಿಖೆಗಾಗಿ ಚಾಸಾ-1 ರವರ ಮಾಲು ಸಮೇತ ಆರೋಪಿಯನ್ನು ಕರೆದುಕೊಂಡು ಬಂದು, ಆರೋಪಿಯ ಸಮೇತ ಗ್ರಾಮಾಂತರ ಪೊಲೀಸ್ ಠಾಣೆ ಗೆ ದೂರನ್ನು ದಾಖಲಿಸಿರುತ್ತಾರೆ, ಸಾಕ್ಷಿಯು ಈಗಾಗಲೇ ಗುರುತಿಸಲ್ಪಟ್ಟ ಸ್ಥಳ ಮಹಜರ್ ಅನ್ನು ನೋಡುತ್ತಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯ ಪೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು, ಅಮಾನತ್ತು ಪಡಿಸಿಕೊಂಡ ಗ್ಯಾಸ್ ಸಿಲಿಂಡರ್ ಹಾಗೂ ಬುಲೆರೋ ವಾಹನದ ಚಾಯಾಚಿತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು KFCSCಯಲ್ಲಿ ದಾಸ್ತಾನು ಮಾಡಿದ 2 ಸಿಲಿಂಡರ್ ಗಳ ಎರಡು

ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ಸಿ.ಡಿಯನ್ನು ನಿಪಿ-7 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀಸವಾಲುಃ ಶ್ರೀ ಹೆಚ್.ವಿ.ಎಲ್ ವಕೀಲರಿಂದಃ**

ನನಗೆ ಇಲಾಖಾ ಜೀಪು ಇರುವುದಿಲ್ಲ. ಒಟ್ಟು 5 ಜನ ಹೋಗಿರುತ್ತೇವೆ. ಎರಡು Two ವೀಲರ್ ನಲ್ಲಿ ಒಟ್ಟಾಗಿ ಹೋಗಿರುತ್ತೇವೆ. ನಾನು ಮತ್ತು ರಾಜಣ್ಣನವರು ಒಂದೇ ವಾಹನದಲ್ಲಿ ಹೋಗಿರುತ್ತೇವೆ. ಉಳಿದವರು ಇನ್ನೊಂದು ವಾಹನವದಲ್ಲಿ ಬಂದಿರುತ್ತಾರೆ. ಒಬ್ಬ ವ್ಯಕ್ತಿಗೆ ಎರಡು ಸಿಲಿಂಡರ್ ಗೃಹ ಬಳಕೆಗೆ ಕೊಡುತ್ತಾರೆ. ವಾಣಿಜ್ಯ ಸಿಲಿಂಡರ್ ಗಳನ್ನು ಅಗತ್ಯಕ್ಕೆ ತಕ್ಕಂತೆ ಕೊಡುತ್ತಾರೆ ಎಂದರೆ ಸರಿ. HP ಪಿಕ್ ಅಪ್ ವಾಹನ ವಿತರಣೆ ಮಾಡುವ ವಾಹನ ಎಂದರೆ ಸರಿ. ನಿಪಿ-4ರಲ್ಲಿ 115 ಸಿಲಿಂಡರ ಗಳು ನನ್ನ ಮುಂದೆ ಇಲ್ಲ. ನಿಪಿ-2 ಮತ್ತು 4 ದಲ್ಲಿ ನನ್ನ ಪೋಟೋ ಇರುವುದಿಲ್ಲ. ಮಹಜರ್ ನಲ್ಲಿ 5 ಜನ ಸಹಿ ಮಾಡಿರುತ್ತೇವೆ. ಮಹಜರ್ ಬರವಣಿಗೆಯನ್ನು ಮಹಜರ್ ಸ್ಥಳದಲ್ಲಿ ಮಾಡಲಾಯಿತು. ಆಹಾರ ನಿರೀಕ್ಷಕರು ಬರೆದಿರುತ್ತಾರೆ. ಸಾಕ್ಷಿದಾರರನ್ನುಪುಡ್ ಕರೆದಿರುತ್ತಾರೆ. ಆ ಸಮಯದಲ್ಲಿ ನನಗೆ ಗೊತ್ತಿರುವುದಿಲ್ಲ.ಸಿಲಿಂಡರ್ ಯಾರಿಗೆ ಸಂಬಂಧಪಟ್ಟಿದ್ದು ನನಗೆ ಗೊತ್ತಿಲ್ಲ. ರಾಜಣ್ಣನವರು ಮಹಜರ್ ಕ್ರಮ ಬರೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ಜೊತೆಗೆ ಕರೆದುಕೊಂಡು ಹೋಗಿ ಸಹಿ ಮಾಡಿಸಿದೇವು ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಅಂಕಿ-ಅಂಶಗಳ ಸಲುವಾಗಿ ಸುಳ್ಳು ದೂರನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.